ಕೆಲವರು ಹತ್ತಿರ ಹೋಗಿ ಅವರ ಎದುರಿನ ನೆಲ ಮುಟ್ಟಿ ನಮಸ್ಕರಿಸುತ್ತಿದ್ದಾರೆ! ಸ್ವಾಮಿಗಳು ಊರಿಗೆ ಬಂದಾಗಲೆಲ್ಲ ನಡೆಯುತ್ತಿದ್ದ ಪರಿಪಾಠ ಇದು. ಕುಳಿತುಕೊಳ್ಳಿ ಅಂತ ಸ್ವಾಮಿಗಳು ಹೇಳಿದ ಮೇಲೆ ಎಲ್ಲರೂ ಕೂತರು. ಆಮೇಲೆ ಸ್ವಾಮಿಗಳೇ ಕೆಲವರ ಹೆಸರು ಹೇಳಿ ಕ್ಷೇಮವೇ ಅಂತ ವಿಚಾರಿಸಿದರು. ಉಳಿದವರ ಕಡೆ ವಿಶ್ವಾಸದಿಂದ ನೋಡಿದರು. ಆಮೇಲೆ ಕೆಲ ಕ್ಷಣ ಸುಮ್ಮನಿದ್ದು, ಗಂಭೀರ ಧ್ವನಿಯಲ್ಲಿ, 'ದೊಡ್ಡವರಿಗೆ ಮುಂದಿನ ಡಿಸೆಂಬರ್‌ಗೆ ಎಂಬತ್ತು ತುಂಬುತ್ತೆ. ಅವರ ಹುಟ್ಟಿದಬ್ಬವನ್ನು ಅದ್ದೂರಿಯಾಗಿ ಮಾಡೋ ಬದಲು ಜನಕ್ಕೆ ಉಪಕಾರ ಆಗುವಂತಹದ್ದೇನಾದರೂ ಮಾಡಬೇಕು. ಈ ಊರಲ್ಲಿ ಇಂಗ್ಲಿಷ್ ಸ್ಕೂಲೊ ಅಥವಾ ಆಸ್ಪತ್ರೆಯನ್ನೊ ಕಟ್ಟಬೇಕು ಅಂತ ಅವರ ಮನಸ್ಸಿನಲ್ಲಿದೆ. ಹೊಸಳ್ಳಿ ಮಹಾಜನರು ಅದನ್ನು ನಡೆಸಿಕೊಡಬೇಕು...' ಎನ್ನುತ್ತ ಎದುರಿಗೇ ಕೂತಿದ್ದ ಪ್ರೆಸಿಡೆಂಟರ ಮುಖ ನೋಡಿದರು.

ಕೆಲವು ಕ್ಷಣಗಳು ಅಲ್ಲಿ ಮೌನ ನೆಲೆಸಿತು. ಮತ್ತೆ ಸ್ವಾಮಿಗಳೇ, 'ಹುಟ್ಟಿದಬ್ಬಕ್ಕೆ ಇನ್ನೂ ಹತ್ತನ್ನೊಂದು ತಿಂಗಳಿವೆ. ಆವತ್ತೇ ಈ ಮಹತ್ಕಾರ್ಯದ ಭೂಮಿ ಪೂಜೆ ಆಗಬೇಕು. ನೀವು ಯೋಚನೆ ಮಾಡಿ... ಏನು ಮಾಡಬೇಕು ಅಂಬೋದನ್ನು ಹೇಳಿ. ಇಲ್ಲಿ ಇಂಗ್ಲಿಷ್ ಸ್ಕೂಲು ಕಟ್ಟಬೇಕು ಅಂತ ನಾವು ಆಸೆ ಪಡ್ತೀವಿ. ಕನ್ನಡ ನಮ್ಮ ತಾಯಿ ಭಾಷೆಯಾದರೂ ವ್ಯವಹಾರಕ್ಕೆ ಇಂಗ್ಲಿಷ್ ಬೇಕಲ್ಲ' ಅಂತ ಹೇಳಿ ಮಾತು ಮುಗಿಸಿದರು.

ಹೊಸಳ್ಳಿಯಲ್ಲಿ ಇಂಗ್ಲಿಷ್ ಕಾನ್ವೆಂಟ್ ತೆರೆಯಲು ಅನುಮತಿ ಪಡೆಯಲು ಓಡಾಡುತ್ತಿರುವ ಟಿವಿಎಸ್ ರಾಮಣ್ಣನಿಗೆ ಸ್ವಾಮಿಗಳ ಮಾತು ಇಷ್ಟವಾಗಲಿಲ್ಲ. ಇಂಗ್ಲಿಷ್ ಸ್ಕೂಲು ತೆರೆಯುವ ಮಗನ ಆಸೆಗೆ ಮಠದವರು ಕಲ್ಲು ಹಾಕುತ್ತಿದ್ದಾರೆ ಅಂತ ಅನ್ನಿಸಿತು. ಸಾವರಿಸಿಕೊಂಡು ಮುಖದ ಮೇಲೆ ಗಂಭೀರ ಭಾವವನ್ನು ತಂದುಕೊಂಡರು. ಎದ್ದು ನಿಂತು, 'ಊರವರ ಪರವಾಗಿ ನನ್ನದೊಂದು ಬಿನ್ನಹ' ಅಂತ ನಾಟಕೀಯವಾಗಿ ಮಾತು ಶುರುಮಾಡಿದರು.

'ನಮ್ಮೂರಿಗೆ ಒಂದು ಕಲ್ಯಾಣ ಮಂಟಪದ ಅವಶ್ಯಕತೆ ಇದೆ. ಮದುವೆ, ಮುಂಜಿ, ನಾಮಕರಣ ಇತ್ಯಾದಿಗಳನ್ನು ಊರವರು ಮತ್ತು ನೆಂಟರಿಷ್ಟರ ಸಮಕ್ಷಮದಲ್ಲಿ ಮಾಡಲು ಸರಿಯಾದ ಜಾಗವಿಲ್ಲ. ದೊಡ್ಡವರ ಹೆಸರಿನಲ್ಲಿ ಒಂದು ಕಲ್ಯಾಣ ಮಂಟಪ ಕಟ್ಟಿಸಿಕೊಟ್ಟರೆ ಹೊಸಳ್ಳಿ ಜನ, ಮಠದ ಹೆಸರನ್ನು ಸದಾ ಸ್ಮರಿಸುತ್ತಾರೆ...' ಅಂತ ನಾಟಕದ ಮಾತುಗಳನ್ನು ಒಪ್ಪಿಸುವಂತೆ ಹೇಳಿ ಸ್ವಾಮಿಗಳತ್ತ ನೋಡುತ್ತ ಕೈಮುಗಿದು ಕುಳಿತರು.

ಒಂದೆರಡು ನಿಮಿಷ ಕಳೆದ ಮೇಲೆ ಪ್ರೆಸಿಡೆಂಟರು ಎದ್ದು ನಿಂತರು. 'ರಾಮಣ್ಣಾರು ಹೇಳಿದ್ದು ನಿಜ. ಊರು ಬೆಳೀತಾ ಐತೆ. ಊರಿಗೊಂದು ಕಲ್ಯಾಣಮಂಟಪ ಬೇಕು. ಊರ ಬಾಗಿಲಲ್ಲಿ ಪಂಚಾಯ್ತಿಗೆ ಸೇರಿದ ಮುಕ್ಕಾಲೆಕರೆ ಜಾಗ ಐತೆ. ಅದನ್ನ ಪಂಚಾಯ್ತಿಯಿಂದ ಕೊಡ್ತೀವಿ. ಕಟ್ಟಡಕ್ಕೆ ಒಂದು ಲಕ್ಷ ರೂಪಾಯಿಯನ್ನು ನಮ್ಮ ತಾಯಿ ಹೆಸರಲ್ಲಿ ಕೊಡ್ತೀನಿ...' ಅಂತ ವಿನಯವಾಗಿ ವಾಗ್ದಾನ ಮಾಡಿದರು. ಎಂಪಿ, ಎಂಎಲ್ಲೆ ನಿಧಿಯಿಂದ ಕಟ್ಟಡಕ್ಕೆ ಹಣ ಕೊಡಿಸುವ ಜವಾಬ್ದಾರಿ ನನ್ನದು ಅಂತಲೂ ಹೇಳಿ ಸ್ವಾಮಿಗಳ ಮುಖ ನೋಡಿದರು.

ಪ್ರೆಸಿಡೆಂಟರು, ರಾಮಣ್ಣ ಮೊದಲೇ ಮಾತಾಡಿಕೊಂಡು ಬಂದಿರಬಹುದೇ ಅನ್ನೋ ಅನುಮಾನ ಸ್ವಾಮಿಗಳಿಗೆ ಶುರುವಾಯಿತು. ಇಂಗ್ಲಿಷ್ ಸ್ಕೂಲು ಬೇಡ ಅಂತ ರಾಮಣ್ಣ ಪರೋಕ್ಷವಾಗಿ ಹೇಳಿದರೆ, ಪ್ರೆಸಿಡೆಂಟರು ಅದನ್ನೇ ಇನ್ನೊಂದು ರೀತಿ ಹೇಳಿದರು ಅಂತ ಅಲ್ಲಿದ್ದವರಿಗೆ ಅರ್ಥವಾಯಿತು.

ಹೊಸಳ್ಳಿಯಲ್ಲಿ ಇಂಗ್ಲಿಷ್ ಸ್ಕೂಲು ತೆರೆಯಬೇಕು ಅಂತ ರಾಮಣ್ಣ ಮತ್ತು ಪ್ರೆಸಿಡೆಂಟರು ಒಟ್ಟಾಗಿ ಪ್ರಯತ್ನಿಸುತ್ತಿರುವುದು ಗುಟ್ಟೇನಲ್ಲ. ರಾಮಣ್ಣನ ಮಗ ಸುಧಾಕರ, 'ನವ ಭಾರತ್ ಎಜುಕೇಷನ್ ಸೊಸೈಟಿ' ಎಂಬ ಸಂಸ್ಥೆ ರಿಜಿಸ್ಟರು ಮಾಡಿಸಿದ್ದ. ಅದಕ್ಕೆ ಕ್ಷೇತ್ರದ ಎಂಎಲ್ಲೆ ಅವರನ್ನೇ ಗೌರವಾಧ್ಯಕ್ಷರನ್ನಾಗಿ